ಶ್ರೀ ಬಿ. ಪುಟ್ಟಸ್ವಾಮಿಗೌಡ, (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

ಅ) ಲೋಕೋಪಯೋಗಿ ಇಲಾಖೆಗೆ ಸಂಬಂದಿಸಿ	ದಕ್ಷಿಣ ಕನ್ನಡ ಜಿಲ್ಲಾಪರಿಷತ್‌ಗೆ ಸಂಬಂಧಿಸಿದಂತೆ
ದಂತೆ ಸುಳ್ಯ ತಾಲ್ಲೂಕು.	ಸುಳ್ಯ ತಾಲ್ಲೂಕು.
ಅಂತರ ಜಿಲ್ಲಾ ರಸ್ತೆ.	ಅಂತರ ಜಿಲ್ಲಾ ರಸ್ತೆ.
೧) ಮೈಸೂರು–ಬಂಟ್ವಾಳ ರಸ್ತೆ (ರಾಜ್ಯ ಹೆದ್ದಾರಿ)ಯ ಭಾಗ–೩೭.೭೦ ಕಿ.ಮೀ. ಸೇತುವೆಗಳು–೫	೧) ನಡುಗಲ್ಲು–ಕಲ್ಮಕಾರು ರಸ್ತೆ–೧೮.೨೦ ಕಿ.ಮೀ. ಸೇತುವೆಗಳು–೧ ೨) ಅರಂತೋಡು ಭಾಗಮಂಡಲ ರಸ್ತೆ ೭.೮೦ ಕಿ. ಮೀ. ಸೇತುವೆಗಳು–೪
ಪುತ್ತೂರು ತಾಲ್ಲೂಕು.	ಪುತ್ತೂರು ತಾಲ್ಲೂಕು.
ಅಂತರ ಜಿಲ್ಲಾ ರಸ್ತೆ :	ಅಂತರ ಜಿಲ್ಲಾ ರಸ್ತೆ :
೧) ಮೈಸೂರು–ಬಂಟ್ವಾಳ ರಸ್ತೆ (ರಾಜ್ಯ ಹೆದ್ದಾರಿ)ಯ ಭಾಗ–೩೪.೨೦ ಕಿ ಮೀ. ಸೇತುವೆಗಳು–೭	ಯಾವುದೇ ಅಂತರ ಜಿಲ್ಲಾ ರಸ್ತೆ ಇರುವುದಿಲ್ಲ.
೨) ಜೆಸಲ್ ಫಾಟ್ ರಸ್ತೆ (ಜಿಲ್ಲಾಮುಖ್ಯ ರಸ್ತೆ) –೫೧.೨೦ ಕಿ.ಮೀ. ಸೇತುವೆಗಳು–೮	

ಶ್ರೀ ಕೆ. ಕಂಶಾಲ.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದ ಅಂತರ್ ಜಿಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದೇ ಮತ್ತು, ಅದರ ದುರಸ್ತಿ ಕಾರ್ಯವನ್ನು ತುರ್ತಾಗಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಈ ಬಗ್ಗೆ ಪ್ರಸ್ತಾವನೆ ನಡೆಯುತ್ತಿದೆ. ಆದರ ಪ್ರೊಸೀಜರ್ ಮುಂಗಿದ ನಂತರ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿಕೊಂಡು ಸರ್ಕಾರದ ವತಿಯಿಂದ ಮಾಡುತ್ತೇವೆಂದು ಹೇಳುತ್ತೇನೆ.

ಅಫಜಲ್‌ಪುರ ತಾಲ್ಲೂಕಿನಲ್ಲಿರುವ ರಸ್ತೆಗಳು

(೭೦) ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರ್ ತಾಲ್ಲೂಕಿನಲ್ಲಿರುವ ದತ್ತಾತ್ರೇಯ ದೇವಸ್ಥಾನಕ್ಕೆ ಯಾತ್ರಿಕರು ಬಂದು ಹೋಗುವ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿರುವ ದತ್ತಾತ್ರೇಯ ದೇವಸ್ಥಾನಕ್ಕೆ ಹೋಗಲು ಇರುವ ರಸ್ತೆಯು ದುಸ್ಥಿತಿಯಲ್ಲಿರುವುದಿಲ್ಲ.

ಆ) ನಿರ್ವಹಣಾ ಅನುದಾನದ ಲಭ್ಯತೆಯನ್ನು ಅನುಸರಿಸಿ ರಸ್ತೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ, ಅಫಜಲ್‌ಪುರದಿಂದ ದತ್ತಾತ್ರೇಯ ದೇವಸ್ಥಾನಕ್ಕೆ ಹೋಗುವ ರಸ್ತೆಯ ಬಗ್ಗೆ ದುಸ್ಥಿತಿಯಲ್ಲಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದೆ. ಆದರೆ ಅವರು ಆ ಪರಿಸ್ಥಿತಿಯಲ್ಲಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸರಿಯಾದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಆ ಪವಿತ್ರವಾದ ದತ್ತಾತ್ರೇಯ ದೇವಸ್ಥಾನಕ್ಕೆ ಪ್ರತಿದಿವಸ ಒಂದು ಸಾವಿರಕ್ಕೂ ಮೇಲ್ಪಟ್ಟು ಯಾತ್ರಿಕರು ಬಂದು ಹೋಗುತ್ತಿರುತ್ತಾರೆ. ರಸ್ತೆಗಳು ಬಹಳ ಚಿಕ್ಕದಾಗಿರುವುದರಿಂದ ಆ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದರಿಂದ ವಾಹನಗಳ

ಸಂಚಾರಕ್ಕೆ ಆಡಚಣೆಯುಂಟಾಗಿದೆ. ಆದ್ದರಿಂದ ಈಗ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಏನು ರಚಿಸಿದ್ದಾರೆ ಆ ಯೋಜನೆಯಲ್ಲಿ ಇಂತಹ ರಸ್ತೆಗಳ ಕೆಲಸ ತೆಗೆದುಕೊಳ್ಳುತಕ್ಕ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಾಡಿದ್ದಾರೆ. ಅದರಂತೆ ಈ ಯೋಜನೆಯಲ್ಲಿ ಈ ರಸ್ತೆಯನ್ನು ಸೇರ್ಪಡೆ ಮಾಡಿ ಅದನ್ನು ಪಕ್ಕಾ ರಸ್ತೆಯನ್ನಾಗಿ ಹಾಗೂ ಆಗಲವಾದ ರಸ್ತೆಯನ್ನಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಪರಿಶೀಲಿಸಲಾಗುತ್ತದೆ.

ಮುನಿಸಿಫ್ ನ್ಯಾಯಾಲಯಗಳ ಬಗ್ಗೆ.

(೧೪೯) ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ).—ಮಾನ್ಯ ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಮುನಿಸಿಫ್ ನ್ಯಾಯಾಲಯಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ನ್ಯಾಯಾಲಯಗಳಿಗೆ ಸ್ವಂತ ? ಕಟ್ಟಡ ಇರುವುದಿಲ್ಲ ? (ಜಿಲ್ಲಾವಾರು ವಿವರಗಳನ್ನು ಕೊಡುವುದು).

ಇ) ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ೨೩೧

ಆ) ೪೮ (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಕೊಟ್ಟಿದೆ).

ಇ) ಸರ್ಕಾರವು ಈ ವಿಷಯವನ್ನು ಉಚ್ಚ ನ್ಯಾಯಾಲಯದಿಂದ ತನಗೆ ಪ್ರಸ್ತಾವನೆಗಳು ಬಂದಂತೆ ನಿಧಿಯು ಲಭ್ಯತೆಗೆ ಒಳಪಟ್ಟು ಪರಿಶೀಲಿಸುತ್ತದೆ.

ಅನುಬಂಧ

ಸ್ವಂತ ಕಟ್ಟಡಗಳಿಲ್ಲದ ಮುನ್ಸಿಫ್ ನ್ಯಾಯಾಲಯಗಳ ಜಿಲ್ಲಾವಾರು ವಿವರ.

೧	ಬೆಂಗಳೂರು (ನಗರ ಪ್ರದೇಶ)	ಯಾವುದೂ ಇಲ್ಲ
೨	ಬೆಂಗಳೂರು (ಗ್ರಾಮಾಂತರ)	೭
೩	ಕೋಲಾರ ಜಿಲ್ಲೆ	೪
೪	ತುಮಕೂರು ಜಿಲ್ಲೆ	೫
೫	ಮೈಸೂರು ಜಿಲ್ಲೆ	೩
೬	ಹಾಸನ ಜಿಲ್ಲೆ	೨
೭	ಮಂಡ್ಯ ಜಿಲ್ಲೆ	೪
೮	ಶಿವಮೊಗ್ಗ ಜಿಲ್ಲೆ	೫
೯	ಚಿಕ್ಕಮಗಳೂರು ಜಿಲ್ಲೆ	೧
೧೦	ಚಿತ್ರದುರ್ಗ ಜಿಲ್ಲೆ	೫
೧೧	ಕೊಡಗು ಜಿಲ್ಲೆ	೧
೧೨	ದಕ್ಷಿಣ ಕನ್ನಡ ಜಿಲ್ಲೆ	ಯಾವುದೂ ಇಲ್ಲ
೧೩	ಉತ್ತರ ಕನ್ನಡ ಜಿಲ್ಲೆ	೨
೧೪	ಬೆಳಗಾಂ ಜಿಲ್ಲೆ	೧
೧೫	ಬಿಜಾಪುರ ಜಿಲ್ಲೆ	೧
೧೬	ಧಾರವಾಡ ಜಿಲ್ಲೆ	೪
೧೭	ಬೀದರ್ ಜಿಲ್ಲೆ	ಯಾವುದೂ ಇಲ್ಲ
೧೮	ಬಳ್ಳಾರಿ ಜಿಲ್ಲೆ	೨
೧೯	ರಾಯಚೂರು ಜಿಲ್ಲೆ	ಯಾವುದೂ ಇಲ್ಲ
೨೦	ಗುಲ್ಬರ್ಗ ಜಿಲ್ಲೆ	೧
	ಒಟ್ಟು :	೪೮